ಪರಿಶೀಲಿಸಲಾಗುವುದು. ಒಂದು ವೇಳೆ ಆ ಕೆಲಸ ಕಳಪೆ ಗುಣಮಟ್ಟದ್ದು ಆಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶುದ್ಧ ಕುಡಿಯುವ ನೀರಿನ ಸರಬರಾಜು

40(348) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ಎಷ್ಟು ಗ್ರಾಮಗಳಲ್ಲಿ ಕೊಳವೆ ಬಾವಿಗಳ ಮೂಲಕ ಶುದ್ಧ ಕುಡಿಯುವ ನೀರಿನ ಯೋಜನೆಯನ್ನು ಕೈಗೊಳ್ಳಲಾಗಿದೆ ; (ಜಿಲ್ಲಾ ಹಾಗೂ ತಾಲ್ಲೂಕುವಾರು ವಿವರ ನೀಡುವುದು)

(ಆ) ಕುಡಿಯುವ ನೀರಿನ ಯೋಜನೆಯನ್ನು ಯಾವ ಯಾವ ಮೂಲಗಳಿಂದ ಅನುಷ್ಠಾನ ಮಾಡಲಾಗಿದೆ ; ಈ ಯೋಜನೆಯಡಿಯಲ್ಲಿ ಎಷ್ಟು ಗ್ರಾಮಗಳಲ್ಲಿ ಕೊಳವೆ ಬಾವಿ ಕೊರೆಯಲಾಗಿದೆ ; ಎಷ್ಟು ಗ್ರಾಮಗಳಲ್ಲಿ ಕೆರೆಗಳಿಂದ ಮತ್ತು ಜಲಾಶಯಗಳಿಂದ ನೀರನ್ನು ಒದಗಿಸಲಾಗಿದೆ ; (ವಿವರ ನೀಡುವುದು)

(ಇ) ಪ್ರಸ್ತುತ ಕುಡಿಯುವ ನೀರನ್ನು ಪೈಪ್‌ಲೈನ್‌ನಿಂದ ಒದಗಿಸುವ ಯೋಜನೆಗಳಲ್ಲಿ ಕೊಳವೆ ಬಾವಿಗಳು ಒಣಗಿ ಹೋಗಿರುವುದು, ಫ್ಲೋರೈಡ್ ಅಂಶವಿರುವುದು, ಕಬ್ಬಿಣ–ಆರ್‌ಸಾನಿಕ್ ಇತ್ಯಾದಿಗಳಿಂದ ಹಾನಿಯಾಗಿರುವ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :–

(ಅ) ರಾಜ್ಯದಲ್ಲಿ ಒಟ್ಟಾರೆ 59753 ಜನವಸತಿಗಳು ಇದ್ದು, ಎಲ್ಲಾ ಜನವಸತಿಗಳಿಗೂ ಕನಿಷ್ಠ ಒಂದು ಕುಡಿಯುವ ನೀರಿನ ಜಲ ಮೂಲ ಒದಗಿಸಲಾಗಿದೆ. ಜಿಲ್ಲಾವಾರು ತಾಲ್ಲೂಕುವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

(ಆ) ಕುಡಿಯುವ ನೀರಿನ ಯೋಜನೆಗಳನ್ನು ಕೊಳವೆ ಬಾವಿ, ತೆರೆದ ಬಾವಿ ಹಾಗೂ ಭೂಮಿಯ ಮೇಲ್ಮೈ ಜಲಮೂಲಗಳಾದ ನದಿ, ಕಾಲುವೆ, ಜಲಾಶಯದ ಮೂಲಗಳಿಂದ ಅನುಷ್ಠಾನ ಮಾಡಲಾಗಿದೆ. ರಾಜ್ಯದ ಕೆರೆ, ಜಲಾಶಯ ಮತ್ತು ಇತರೆ ಮೇಲ್ಮೈ

ಜಲಮೂಲಗಳಿಂದ 182 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದೆ. ಒಟ್ಟು 1275 ಜನವಸತಿಗಳಿಗೆ ಸುರಕ್ಷಿತ ನೀರನ್ನು ಪೂರೈಸಲು ಕ್ರಮವಹಿಸಿದೆ. ಉಳಿದ 58478 ಜನವಸತಿಗಳಿಗೆ ಅಂತರ್ಜಲ ಮೂಲ ಆಧರಿತ, ಕೈ ಪಂಪ್, ಕೊಳವೆ ಬಾವಿ, ತೆರೆದ ಬಾವಿ, ಕಿರುನೀರು ಸರಬರಾಜು, ನಳ ನೀರು ಸರಬರಾಜು ಯೋಜನೆಗಳಿಂದ ನೀರು ಪೂರೈಕೆ ವ್ಯವಸ್ಥೆ ಮಾಡಿದೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ವಿವರಗಳನ್ನು **ಅನುಬಂಧ–2** ರಲ್ಲಿ ನೀಡಿದೆ.

(ಇ) ಪ್ರಸ್ತುತ ಕೊಳವೆ ಬಾವಿಗಳು ಒಣಗಿ ಹೋದ ಕಡೆಗಳಲ್ಲಿ ರಾಜ್ಯ ವಲಯದ MNP ಅಡಿಯಲ್ಲಿ ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿ ಶಿಫಾರಸ್ಸಿನ ಮೇರೆಗೆ ಹೊಸ ಕೊಳವೆ ಬಾವಿಗಳನ್ನು ಕೊರೆದು ಪೈಪ್‌ಲೈನ್ ಮತ್ತು ಅವಶ್ಯವಿದ್ದಲ್ಲಿ ಹೆಚ್ಚುವರಿ ಸಾಮರ್ಥ್ಯದ ಪಂಪ್‌ಸೆಟ್ ಅಳವಡಿಸಿ ಯೋಜನೆಗಳನ್ನು ಪುನರ್‌ಚೇತನ ಗೊಳಿಸಲು 2013–14ನೇ ಸಾಲಿನಲ್ಲಿ ರೂ. 86.70 ಕೋಟಿ ಮತ್ತು 2014–15 ನೇ ಸಾಲಿನಲ್ಲಿ ರೂ. 100.00 ಕೋಟಿ ಅನುದಾನ ಒದಗಿಸಲಾಗಿದೆ. ಸಮಸ್ಯಾತ್ಮಕ ಜನವಸತಿಗಳನ್ನು ಪ್ರಸಕ್ತ ಸಾಲಿನ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮದ (NRDWP) ಕ್ರಿಯಾಯೋಜನೆಯ ಮಾರ್ಗಸೂಚಿಗಳನುಸಾರ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಕುಡಿಯುವ ನೀರಿನ ಜಲಮೂಲಗಳಲ್ಲಿ ಅಧಿಕ ಫ್ಲೋರೈಡ್ ಕಬ್ಬಿಣಾಂಶ, ಆರ್‌ಸೆನಿಕ್ ಮತ್ತಿತರೆ ರಾಸಾಯನಿಕ ಕಲುಷಿತೆಯಿರುವ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳ ಜೊತೆಗೆ 1687 ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಕ್ರಮವಹಿಸಿದೆ. ಇವುಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ–3**ರಲ್ಲಿ ನೀಡಲಾಗಿದೆ. ಇದಲ್ಲದೇ, 2000 ಸಮಸ್ಯಾತ್ಮಕ ಜನವಸತಿಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು 2014–15ನೇ ಸಾಲಿನಲ್ಲಿ ಸರ್ಕಾರೇತರ / ಸಂಘ / ಸಹಕಾರ ಸಂಸ್ಥೆಗಳ ಸಹಯೋಗದಲ್ಲಿ ಅಳವಡಿಸಲು ಸಹ ಉದ್ದೇಶಿಸಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:3480ರ ಅನುಬಂಧ

ಅನುಬಂಧ –I

Sl. No.	District	Sl. No.	Name of Taluk	No. of Total Habitations as in IMIS	Total Habitations covered under MVSS	Total Habitations covered Under Dw/Open well based schemes
1	Bagalkot	1	BADAMI	164	42	122
		2	BAGALKOT	99	25	74
		3	BILAGI	85	18	67
		4	HUNGUND	164	72	92
		5	JAMAKHANDI	362	19	343
		6	MUDHOL	135	28	107
			Total	1009	204	805
2	Bangalore(R)	1	DEVANAHALLI	196	0	196
		2	DODBALLAPUR	440	0	440
		3	HOSKOTE	285	0	285
		4	NELAMANGALA	306	0	306
			Total	1271	0	1271
3	Bangalore(U)	1	ANEKAL	337	0	337
		2	BANGALORE EAST	83	0	83
		3	BANGALORE NORTH	341	0	341
		4	BANGALORE SOUTH	276	0	276
			Total	1037	0	1037
4	Belgaum	1	ATHANI	241	55	186
		2	RAILHONGAL	147	33	114
		3	BELGAUM	289	0	289
		4	CHIKODI	164	44	120
		5	GOKAK	161	33	128
		6	HUKERI	186	25	161
		7	KHANAPUR	304	0	304
		8	RAMDURG	140	0	140
		9	RAYBAG	109	11	98
		10	SAUNDATTI	149	14	135
			Total	1790	195	1595
5	Gellary	1	BELLARY	186	86	100
		2	HADAGALLI	112	38	74
		3	HAGARIBOMMANAHALLI	118	0	118
		4	HOSPET	126	22	104
		5	KUDLIGI	217	0	217
		6	SANDUR	114	0	114
		7	SIRUGUPPA	142	12	130
			Total	1012	152	860
6	Bidar	1	AURAD	200	0	200
		2	BASAVAKALYAN	184	0	184
		3	BHALKI	159	0	159
		4	BIDAR	141	15	126
		5	HUMNABAD	107	0	107
			Total	951	15	886
7	Bijapur	1	BASAVANA BAGEWADI	164	24	140
		2	BIJAPUR	294	0	294
		3	INDI	248	3	245
		4	MUDDEBIHAL	172	59	113
		5	SINDGI	179	0	179
			Total	1049	86	963
8	C.R Nagar	1	CHAMARAJANAGAR	251	0	251
		2	GUNDLUPET	188	0	188
		3	KOLLEGALA	341	0	341
		4	YELANDUR	40	2	42
			Total	820	8	822
9	Chickballapur	1	BAGEPALLI	435	0	435
		2	CHIKBALLAPUR	315	0	315
		3	CHINTAMANI	429	0	429
		4	GAURIBIDANUR	345	0	345
		5	GUDIBANDA	124	0	124
		6	SIDLAGHATTA	274	0	274
			Total	1921	0	1921
10	Chickmagalur	1	CHICKMAGALUR	525	2	523
		2	KADUR	445	0	445
		3	KOPPA	816	0	816
		4	MUDIGERE	441	0	441
		5	NARASIMHARAJAPURA	430	0	430
		6	SRINGERI	506	0	506
		7	TARIKERE	253	0	253
			Total	3506	2	3504

11	Chitradurga	1	CHALLAKERE	350	0	350
		2	CHITRADURGA	257	1	258
		3	HIRIYUR	283	0	283
		4	HOLALKERE	223	0	223
		5	HOSADURGA	355	0	355
		6	MOLAKALMURU	134	0	134
			Total	1631	1	1632
12	Dakshina Kannada	1	BANTWAL	673	0	673
		2	BELTANGADI	874	0	874
		3	MANGALORE	1012	0	1012
		4	PUTTUR	731	0	731
		5	SULLIA	292	0	292
			Total	3582	0	3582
13	Davanagere	1	CHANNAGIRI	248	30	278
		2	DAVANAGERE	209	29	177
		3	HARAPPANAHALLI	250	1	229
		4	HARIHARA	89	29	60
		5	HONNALI	189	7	182
		6	JAGALUR	174	0	174
			Total	1134	96	1038
14	Dharwad	1	DHARWAD	126	0	126
		2	HUBLI	46	2	44
		3	KALGHATGI	101	0	101
		4	KUNDGOL	58	1	57
		5	NAVALGUND	57	12	45
			Total	388	16	373
15	Gadag	1	GADAG	67	4	63
		2	MUNDARAGI	54	17	37
		3	NARAGUND	33	1	32
		4	RON	98	9	89
		5	SHIRAHATTI	90	0	90
			Total	342	31	311
16	Gulbarga	1	AFZALPUR	130	7	123
		2	ALAND	185	0	185
		3	CHINCHOLI	220	0	220
		4	CHITTAPUR	195	8	187
		5	GULBARGA	223	0	223
		6	JEWARGI	164	20	144
		7	SEDAM	152	0	152
			Total	1269	35	1234
17	Hassan	1	ALUR	541	0	541
		2	ARKALGUD	422	0	422
		3	ARSIKERE	571	0	571
		4	BELUR	472	0	472
		5	CHANNARAYAPATNA	550	0	550
		6	HASSAN	441	0	441
		7	HOLENARSIPUR	311	5	306
		8	SAKALESHPUR	503	0	503
			Total	3811	5	3806
18	Haveri	1	BYADGI	64	16	48
		2	HANAGAL	161	7	154
		3	HAVERI	92	11	81
		4	HIREKERUR	131	13	118
		5	RANEBENNUR	108	0	108
		6	SAVANUR	64	0	64
		7	SHIGGAON	91	0	91
			Total	711	47	664
19	Kodagu	1	MADIKERI	97	0	97
		2	SOMVARPET	308	0	308
		3	VIRAJPET	127	0	127
			Total	532	0	532
20	Kolar	1	BANGARAPET	502	0	502
		2	KOLAR	364	0	364
		3	MALUR	330	0	330
		4	MULBAGAL	389	0	389
		5	SRINIVASAPURA	375	0	375
			Total	1960	0	1960

21	Koppal	1	GANGAVATHI	242	72	170
		2	KOPPAL	166	0	166
		3	KUSHTAGI	176	0	176
		4	YELBURGA	153	0	153
			Total	737	72	665
22	Mandya	1	KRISHNARAJPET	360	25	335
		2	MADDUR	270	0	270
		3	MALVALLI	280	0	280
		4	MANDYA	274	0	274
		5	NAGAMANGALA	507	1	506
		6	PANDAVAPURA	178	33	145
		7	SHRIRANGAPATANA	117	6	111
			Total	1986	67	1919
23	Mysore	1	HEGGADA DEVANKOTE	414	0	414
		2	HUNSUR	300	0	300
		3	KRISHNARAJANAGARA	220	20	200
		4	MYSORE	198	0	198
		5	VIRAJPET	270	0	270
		6	PIRIYAPATNA	308	0	308
		7	TIRUMAKUDAL-NARSIPUR	213	0	213
			Total	2003	20	1983
24	Raichur	1	DEVDURGA	330	4	326
		2	LINGSUGUR	340	8	332
		3	MANVI	330	0	330
		4	RAICHUR	167	0	167
		5	SINDHNUR	273	60	213
			Total	1440	72	1368
25	Ramanagaram	1	CHANNAPATNA	354	0	354
		2	KANAKAPURA	770	0	770
		3	MAGADI	754	0	754
		4	RAMANAGARAM	350	0	350
			Total	2137	0	2137
26	Shimoga	1	BHADRAVATI	217	34	183
		2	HOSANAGARA	1107	0	1107
		3	SAGAR	1021	0	1021
		4	SHIKARPUR	196	0	196
		5	SHIMOGA	249	0	249
		6	SORAB	348	0	348
		7	TIRTHAHALLI	1663	0	1663
			Total	4801	34	4767
27	Tumkur	1	CHIKNAYAKANHALLI	552	0	552
		2	GUBBI	734	5	729
		3	KORATAGERE	383	0	383
		4	KUNIGAL	755	2	753
		5	MADHUGIRI	456	0	456
		6	PAVAGADA	769	0	769
		7	SIRA	491	0	491
		8	TIPTUR	391	20	371
		9	TUMKUR	752	41	711
		10	TURUVEKERE	430	0	430
			Total	5313	74	5239
28	Udupi	1	KARKAL	1090	0	1090
		2	KUNDAPURA	1202	0	1202
		3	UDUPI	1196	0	1196
			Total	3497	0	3497
29	Uttara Kannada	1	ANKOLA	376	0	376
		2	BHATKAL	428	1	427
		3	HALIYAL	187	0	187
		4	HONAVAR	1035	0	1035
		5	JOIDA (SUPA)	471	0	471
		6	KARWAR	483	9	474
		7	KUMTA	510	0	510
		8	MUNDGOD	182	12	170
		9	SIDDAPUR	1304	0	1304
		10	SIRSI	1472	6	1466
		11	YELLAPUR	991	0	991
			Total	7409	28	7381
30	Yadgiri	1	SHAHAPUR	202	11	191
		2	SHORAPUR	374	0	374
		3	YADGIR	220	7	213
			Total	745	18	727
	GRAND TOTAL			59753	1275	58478

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3183ಕ್ಕೆ ಉತ್ತರಿಸಲು

ಅನುಬಂಧ – 2

ಜಿಲ್ಲಾವಾರು ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳ ವಿವರ

(ರೂಪಾಯಿಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆ	ಪೂರ್ಣಗೊಂಡಿರುವ			
		ಯೋಜನೆಗಳ ಸಂಖ್ಯೆ	ಅಂದಾಜು ಮೊತ್ತ	ಆವರಿಸಿದ ಜನವಸತಿಗಳ ಸಂಖ್ಯೆ	ಆವರಿಸಿದ ಮುಖಾಮುಖಿಯ ಬಾಧಿತ ಜನವಸತಿಗಳ ಸಂಖ್ಯೆ
1	2	3	4	5	6
1	ಬಾಗಲಕೋಟೆ	17	10376.07	204	121
2	ಬೆಂಗಳೂರು (ಗ್ರಾ)				
3	ಬೆಂಗಳೂರು (ನ)				
4	ಬೆಳಗಾಂ	36	13096.44	195	160
5	ಬಳ್ಳಾರಿ	40	10057.65	152	148
6	ಬೀದರ್	1	738.00	15	10
7	ಬಿಜಾಪುರ	9	3382.23	86	61
8	ಚಾಮರಾಜನಗರ	1	570.00	8	5
9	ಚಿಕ್ಕಬಳ್ಳಾಪುರ				
10	ಚಿಕ್ಕಮಂಗಳೂರು	1	178.90	2	2
11	ಚಿತ್ರದುರ್ಗ	1	31.00	1	1
12	ದಕ್ಷಿಣ ಕನ್ನಡ				
13	ದಾವಣಗೆರೆ	11	6049.34	96	89
14	ಧಾರವಾಡ	6	909.57	15	12
15	ಗದಗ	9	1833.21	31	23
16	ಗುಲ್ಬರ್ಗಾ	7	997.70	35	34
17	ಹಾಸನ	1	119.00	5	4
18	ಹಾವೇರಿ	5	3187.99	47	22
19	ಕೊಡಗು				
20	ಕೋಲಾರ				
21	ಕೊಪ್ಪಳ	5	4430.83	72	59
22	ಮಂಡ್ಯ	5	2409.00	67	43
23	ಮೈಸೂರು	2	855.00	20	18
24	ರಾಮನಗರ				
25	ರಾಯಚೂರು	7	4201.40	70	40
26	ಶಿವಮೊಗ್ಗ	3	1318.84	34	32
27	ತುಮಕೂರು	9	2709.53	74	51
28	ಉಡುಪಿ				
29	ಉತ್ತರ ಕನ್ನಡ	4	1827.00	28	12
30	ಯಾದಗಿರಿ	2	495.00	18	18
	TOTAL	182	69773.70	1275	965

ಜಿಲ್ಲಾವಾರು ಶುದ್ಧೀಕರಣ ಘಟಕಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಒಟ್ಟು ಶುದ್ಧೀಕರಣ ಘಟಕಗಳ ಸಂಖ್ಯೆ	ಚಾಲ್ತಿಯಲ್ಲಿರುವ ಶುದ್ಧೀಕರಣ ಘಟಕಗಳ ಸಂಖ್ಯೆ	ಪ್ರಗತಿಯಲ್ಲಿರುವ ಶುದ್ಧೀಕರಣ ಘಟಕಗಳ ಸಂಖ್ಯೆ
1	ಬಾಗಲಕೋಟೆ	35	-	-
2	ಬೆಳಗಾಂ	54	-	-
3	ಬಿಜಾಪುರ	7	-	30
4	ಬೆಂಗಳೂರು (ನ)	12	-	-
5	ಚಿಕ್ಕಬಳ್ಳಾಪುರ	24	50	30
6	ಬಳ್ಳಾರಿ	103	-	20
7	ಗದಗ	6	45	40
8	ಹಾವೇರಿ	-	-	-
9	ಕೊಪ್ಪಳ	13	35	30
10	ಗುಲ್ಬರ್ಗಾ	41	50	20
11	ಬೀದರ್	5	-	-
12	ಚಿಕ್ಕಮಗಳೂರು	9	-	-
13	ಹಾಸನ	14	5	-
14	ಚಿತ್ರದುರ್ಗ	43	30	20
15	ದಾವಣಗೆರೆ	100	-	20
16	ಕೋಲಾರ	71	50	20
17	ಮಂಡ್ಯ	160	15	10
18	ರಾಯಚೂರು	113	30	20
19	ತುಮಕೂರು	149	57	30
20	ಧಾರವಾಡ	11	-	-
21	ಮೈಸೂರು	30	-	-
22	ಯಾದಗಿರಿ	-	20	10
ಒಟ್ಟು		1000	387	300

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಕರ್ನಾಟಕ ರಾಜ್ಯದ ಎಲ್ಲ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಟ್ಟಿದೆ ಇದು ಸಂತೋಷದ ವಿಚಾರ. ಸುಮಾರು 59,753 ಜನವಸತಿಗಳಿಗೆ ಕುಡಿಯುವ ನೀರನ್ನು ಒದಗಿಸಿ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಈಗ ಕುಡಿಯುವ ನೀರನ್ನು ಬಹುತೇಕ ಬೋರ್‌ವೆಲ್‌ಗಳ ಮುಖಾಂತರ ಪೂರೈಸಲಾಗುತ್ತಿದೆ. ಆದರೆ, ಕೆಲವು ಬೋರ್‌ವೆಲ್‌ಗಳು ಒಣಗಿ ಹೋಗಿವೆ. ಮತ್ತೆ ಕೆಲವು ಕಡೆ ಫ್ಲೋರೈಡ್, ಆರ್‌ಸೆನಿಕ್ ಮತ್ತು ಕಬ್ಬಿಣದ ಅಂಶ ಇದೆ. ಈ ನೀರು ಜನರ ಆರೋಗ್ಯಕ್ಕೆ ಹಾನಿಕರವಾಗುತ್ತದೆ. ಆದ್ದರಿಂದ, ನದಿ ಮೂಲದಿಂದ ಈ ಗ್ರಾಮಗಳಿಗೆ ಕುಡಿಯುವ ನೀರನ್ನು ಕೊಡಿ ಎಂಬುದು ನನ್ನ ಪ್ರಶ್ನೆಯಾಗಿದೆ. ಏಕೆಂದರೆ, 32,000ಕ್ಕಿಂತ ಹೆಚ್ಚು ಹಳ್ಳಿಗಳು ಕುಡಿಯುವ ನೀರಿನ ತೊಂದರೆಯಲ್ಲಿವೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ 20 ವರ್ಷಗಳಲ್ಲಿ ಕುಡಿಯುವ ನೀರಿನಿಂದ ಜನ ಸಾಯುತ್ತಾರೆ. ಮಾನ್ಯ ಸಚಿವರು 2014ರಲ್ಲಿ STUP consultancyಯಿಂದ complete survey ಮಾಡಿಸಿದ್ದಾರೆ. ಅವರು 52,000 ಕೋಟಿ ರೂಪಾಯಿಯ ಒಂದು ಅಂದಾಜನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ಎಲ್ಲ ಹಳ್ಳಿಗಳಿಗೆ ಕುಡಿಯುವ ನೀರು ಬೇಕು. ಆದ್ದರಿಂದ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಹಾಗೆಯೇ ಅದರಲ್ಲಿ ಅವರು ಏನು ಹೇಳಿದ್ದಾರೆಂದರೆ,....

ಅಧ್ಯಕ್ಷರು : ಪ್ರಶ್ನೆ ಮತ್ತು ಉತ್ತರವನ್ನು ನೀವೇ ಹೇಳುತ್ತೀದ್ದೀರಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಹೇಳುತ್ತಾರೆ ಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ , ಕುಡಿಯುವುದಕ್ಕೋಸ್ಕರ 65 ಟಿ.ಎಂ.ಸಿ. ನೀರು ಬೇಕೆಂದು ಅವರು ಹೇಳಿದ್ದಾರೆ, ಆದ್ದರಿಂದ, ಕುಡಿಯುವುದಕ್ಕೆ ನೀರನ್ನು ಯಾವ ನದಿ ಮೂಲದಿಂದ ತರುತ್ತೀರಿ ? ಈ ಬಗ್ಗೆ ಏನಾದರೂ ಯೋಜನೆಯನ್ನು ಹಾಕಿಕೊಂಡಿದ್ದೀರಾ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ : ಮಾನ್ಯ ಅಧ್ಯಕ್ಷರೆ, Multi-village Scheme ಅಡಿಯಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹಳ್ಳಿಗಳು ಬರುತ್ತದೆಂದು ಮಾನ್ಯ ಸಚಿವರು ಪಟ್ಟಿ ಕೊಟ್ಟಿದ್ದಾರೆ. ಆದರೆ, ಏಕೋ ನಮ್ಮ ಚಿಕ್ಕಮಗಳೂರು ಜಿಲ್ಲೆ ಈ ಪಟ್ಟಿಯೊಳಗಡೆ ಕಳಪೆ ಸ್ಥಾನವನ್ನು ಪಡೆದುಕೊಂಡಿದೆ. ಏಕೆಂದರೆ, ನೀವೇ ಕೊಟ್ಟಿರುವ ಮಾಹಿತಿ ಪ್ರಕಾರ ಇಡೀ ಚಿಕ್ಕಮಗಳೂರು ಜಿಲ್ಲೆಯಲ್ಲಿ 2 ಮಾತ್ರ ಇದೆ. ಅದರಲ್ಲೂ ನನ್ನ ಕ್ಷೇತ್ರವಾದ ಕಡೂರು ತಾಲ್ಲೂಕಿನಲ್ಲಿ ಶೂನ್ಯ ಇದೆ.

ಅಧ್ಯಕ್ಷರು : ಮಾನ್ಯ ದತ್ತಾರವರೇ, ಇದು ಪ್ರಶ್ನೆ ಕೇಳುವ ವಿಧಾನವೇ ? ಚಿಕ್ಕಮಗಳೂರು ಜಿಲ್ಲೆಗೆ ಕೊಟ್ಟಿರುವ ಪಟ್ಟಿಯಲ್ಲಿ ನನ್ನ ಕ್ಷೇತ್ರ ಬಿಟ್ಟು ಹೋಗಿದೆ, ಬಿಟ್ಟು ಹೋಗಲು ಕಾರಣ ಏನೆಂದು ಕೇಳಿದರೆ ಸಾಕು. ಇದನ್ನು ಕೇಳುವುದನ್ನು ಬಿಟ್ಟು ಬೇರೆ ರೀತಿಯಲ್ಲಿ ಕೇಳಿದರೆ ಹೇಗೆ ?

ಶ್ರೀ ವೈ.ಎಸ್.ವಿ ದತ್ತಾ: ಮಾನ್ಯ ಅಧ್ಯಕ್ಷರೆ, ಅದನ್ನೆ ನಾನು ಬೇರೆ ರೀತಿಯಲ್ಲಿ ಕೇಳಿದ್ದೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮುಖ್ಯವಾದಂಥ ವಿಚಾರವಾಗಿದೆ. ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆ ಇದೆ. ಆದರೆ, ಇದಕ್ಕೆ ಮಾಡಿಕೊಂಡಿರುವ ನಿಯಮಾವಳಿಯಿಂದ ನಮ್ಮ ಮಲೆನಾಡು ಪ್ರದೇಶಕ್ಕೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ, ನಿಯಮಾವಳಿಯನ್ನು ಸಡಿಲಿಸಬೇಕಾಗುತ್ತದೆ. ಇದು ಕೇವಲ ಮೈದಾನ ಪ್ರದೇಶಗಳಿಗೆ ಮಾತ್ರ ಅನುಕೂಲವಾಗುತ್ತದೆ. ನಮ್ಮಲ್ಲಿ ಜನಸಾಂದ್ರತೆ ಕಡಿಮೆ ಇದೆ. ಆದರೆ, ಜಾಗದ ವಿಸ್ತೀರ್ಣ ಹೆಚ್ಚಾಗಿದೆ. ಪ್ರತಿಯೊಬ್ಬನಿಗೂ ಸಹ ಕುಡಿಯುವ ನೀರಿನ ಹಕ್ಕು ಇದೆ. ಆದ್ದರಿಂದ, ಅಲ್ಲಿರುವ ನಾರ್ಮ್ಸ್ ಅನ್ನು ಸಡಿಲಿಸಬೇಕೆಂಬುದರ ಬಗ್ಗೆ SLAC ಕಮಿಟಿಗೆ ತಾವು ನಿರ್ದೇಶನ ಕೊಡಬೇಕಾಗುತ್ತದೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಕಛೇರಿಗಳಿಗೆ ನಾನು ಹತ್ತಾರು ಸಾರಿ ಅಲೆದಿದ್ದೇನೆ ಇದರಿಂದ ನಮ್ಮ ಮಲೆನಾಡು ಭಾಗಕ್ಕೆ ಯಾವುದೇ ರೀತಿಯ ಅನುಕೂಲವಾಗುತ್ತಿಲ್ಲ. ಆದ್ದರಿಂದ, ಈ ಬಗ್ಗೆ ಗಮನಹರಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ Fluoride ಮತ್ತು ಕಬ್ಬಿಣ ಅಂಶದ ನೀರನ್ನು ಕುಡಿದು 50 ಜನ special treatment ಅನ್ನು ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು : ಅವರು ಕೇಳಿರುವ ಪ್ರಶ್ನೆ ಏನು? ನೀವು ಕೇಳುತ್ತಿರುವುದು ಏನು? ಆಮೇಲೆ ನೀವು ಕೇಳಿ.

ಶ್ರೀ ಕೆ. ಶಿವಮೂರ್ತಿ : ದಯವಿಟ್ಟು ಮುಂದಿನ ದಿವಸಗಳಲ್ಲಿ ಜನಸಂಖ್ಯೆ ಜಾಸ್ತಿಯಾಗುವ ಸಂಭವ ಇರುವುದರಿಂದ ಆರ್ಸೆನಿಕ್ ಮತ್ತು ಫ್ಲೋರೈಡ್ ಅಂಶ ಜಾಸ್ತಿಯಾಗುವ ಸಂಭವ ಇರುವುದರಿಂದ ಮಾನ್ಯ ರಾಯರೆಡ್ಡಿಯವರು ಹೇಳಿದಂತೆ, ನದಿ ಮೂಲದ ಕುಡಿಯುವ ನೀರನ್ನು permnent sourceಆಗಿ ಇಟ್ಟುಕೊಳ್ಳುವುದಕ್ಕೆ ಎಷ್ಟು ನೀರು ಬೇಕಾಗುತ್ತದೆಂದು ಏನಾದರೂ assess ಮಾಡಿದ್ದೀರಾ? ಎಲ್ಲಾ ನದಿಗಳಿಂದ ಶುದ್ಧ, ಸ್ವಚ್ಛ ಮತ್ತು ಆರೋಗ್ಯಕರವಾದ ಕುಡಿಯುವ ನೀರನ್ನು ಪಡೆಯಲಿಕ್ಕೆ ಏನಾದರೂ assess ಮಾಡಿದ್ದೀರಾ?

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ದತ್ತಾರವರು ಕೇಳಿದಂಥ ಒಂದು ಉಪಪ್ರಶ್ನೆಗೆ, ಅವರು ಚಿಕ್ಕಮಗಳೂರು ಜಿಲ್ಲೆಯನ್ನು ಬಿಟ್ಟು ಬಿಟ್ಟಿದ್ದೀರೆಂದು ಹೇಳಿ ಬಹಳ ನೋವು ಮಾಡಿಕೊಂಡರು. ಆ MVS ಪಟ್ಟಿಯಲ್ಲಿ ನಿಮ್ಮನ್ನು ಬಿಟ್ಟಿದ್ದೇವೆ. ಆದರೆ ಶುದ್ಧ ಕುಡಿಯುವ ನೀರಿನ ಪಟ್ಟಿಯೊಳಗೆ ತೆಗೆದುಕೊಂಡಿದ್ದೇವೆ ನೋಡಿ.

ಅಧ್ಯಕ್ಷರು : ಚಿಕ್ಕಮಗಳೂರು ಪಟ್ಟಿಯಲ್ಲಿ ಇದೆ.

ಶ್ರೀ ವೈ.ಎಸ್. ವಿ. ದತ್ತಾ : ಅದು ಬೇಕು. ಇದು ಬೇಕೆಂದು ಹೇಳುತ್ತಿದ್ದೇವೆ. ಏಕೆಂದರೆ ನಮ್ಮದು ಬರಪೀಡಿತ ತಾಲ್ಲೂಕು.

ಶ್ರೀ ಹೆಚ್.ಕೆ. ಪಾಟೀಲ್ : ನೀವು ಎಲ್ಲಿ ಇದೆ ಎಂದು ನೋಡಿದ್ದಿಲ್ಲ. ಈ ಮಲೆನಾಡು ಮತ್ತು ಕೋಸ್ಟರ್ ಏರಿಯಾದಲ್ಲಿ ಸ್ವಲ್ಪಮಟ್ಟಿನ ಕೆಲವು ನಿಯಮಗಳ ಸಡಿಲಿಸಲಿಕ್ಕೆ ಅವಶ್ಯ ಇದೆ ಅವುಗಳನ್ನು ಪರಿಶೀಲನೆ ಮಾಡುತ್ತಿದ್ದೇವೆ. SLACಯೊಳಗೆ ಬಹಳಷ್ಟು ತೊಂದರೆಗಳು ಆಗುತ್ತಿವೆ. ಅತ್ಯಂತ ಮಹತ್ವದ್ದು ಎಂದು ಅದು ನಮಗೆ

ಅನಿಸುತ್ತದೆ. ತಾಂತ್ರಿಕವಾಗಿ ಅದು ಅಲ್ಲಿ ಒಪ್ಪಿಗೆ ಆಗುವುದಿಲ್ಲ. Central representatives ಯಾರು ಇರುತ್ತಾರೆ, ಅವರು ನಮ್ಮ parameters ನಲ್ಲಿ ಬರುವುದಿಲ್ಲವೆಂದು ಕಿತ್ತು ಒಗೆಯುತ್ತಾರೆ. ಅದು ಅಸಮಾಧಾನಕ್ಕೂ ಕಾರಣವಾಗುತ್ತಿದೆ. ಅದನ್ನು ಪುನರ್ ಪರಿಶೀಲನೆ ಮಾಡುತ್ತಿದ್ದೇವೆ. ಸನ್ಮಾನ್ಯ ರಾಯರೆಡ್ಡಿಯವರು ಬಹಳ ಮಹತ್ವದ ಮತ್ತು ಬಹಳ ದೊಡ್ಡ ಪ್ರಶ್ನೆಯನ್ನು ಎತ್ತಿದ್ದಾರೆ. ಚರ್ಚೆಯ ಸಂದರ್ಭದಲ್ಲಿ ಚರ್ಚೆ ಮಾಡುವುದಕ್ಕೆ ಬಹಳ ವಿಹಿತವಾದ ವಿಷಯ. ನಾವು ಸಂಪೂರ್ಣವಾಗಿ ಬೋರ್‌ವೆಲ್ ಮೇಲೆ ಅವಲಂಬನೆ ಆಗಿದ್ದೇವೆ. ಕಳೆದ 25 ವರ್ಷಗಳಲ್ಲಿ ನಾವೆಲ್ಲಾ ನೀರು ಎಂದರೆ ಬೋರ್‌ವೆಲ್ ಎಂದು ಬಂದು ಬಿಟ್ಟಿದ್ದೇವೆ. ಆದರೆ ಇವತ್ತು ಬೋರ್‌ವೆಲ್ ಡ್ರೈ ಆಗತಕ್ಕಂಥ ಕಾರಣದಿಂದಾಗಿ, ಹಾಗೂ ಬೋರ್‌ವೆಲ್‌ನಲ್ಲಿ ಏನು ಸಾಕಷ್ಟು ನೀರು ಕಲುಷಿತ ಇರುತ್ತದೆ ಎನ್ನತಕ್ಕಂಥದ್ದು ನಮಗೆ ಎಲ್ಲಾ ಗೊತ್ತಾದ ಮೇಲೆ ನಾವು ಈಗ ಮೇಲ್ಟ್ಟ ನೀರನ್ನು ನದಿ ಮೂಲಕ ನೀರನ್ನು ಹುಡುಕುತ್ತಿದ್ದೇವೆ. ಅದಕ್ಕಾಗಿಯೇ ಒಂದು ವಿಸ್ತೃತವಾದ ಅಧ್ಯಯನವನ್ನು ಮಾಡಿಸಿದ್ದೇನೆ. ಈ Stup company ಅವರಿಂದ ನಮ್ಮ ರಾಜ್ಯದಲ್ಲಿ ಎಷ್ಟು ಗ್ರಾಮೀಣ ಭಾಗಗಳಿಗೆ ನೀರನ್ನು ಕೊಡುವುದಾದರೆ ಎಷ್ಟು ಯೋಜನೆಗಳನ್ನು ಮಾಡಬೇಕಾಗುತ್ತದೆ, ಎಲ್ಲೆಲ್ಲಿ ನಾವು ನದಿ ಮೂಲದಿಂದ ನೀರನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಎನ್ನತಕ್ಕಂಥ ಒಟ್ಟು ಸಮಗ್ರವಾಗಿರತಕ್ಕಂಥ ರಾಜ್ಯದ ಒಂದು ಯೋಜನೆಯನ್ನು ಮಾಡಿಸಿರುತ್ತೇವೆ. That is a preliminary study ಆ study ಅನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ಮೊದಲಿನಂತೆ ನಾವು ಈಗ mini water scheme, piped water scheme ಎಂದು ಹೇಳಿ ಒಂದೆರಡು ಬೋರ್‌ವೆಲ್ ಮಾಡಿದರೆ ಸಾಕಾಗುವುದಿಲ್ಲವೆನ್ನುವ ಒಂದು ಸಂಪೂರ್ಣ ಅರಿವು ಸರ್ಕಾರಕ್ಕೆ ಇದೆ. ಆದ್ದರಿಂದ ವಿಸ್ತೃತವಾಗಿರತಕ್ಕಂಥ ಕುಡಿಯುವ ನೀರಿನ ಯೋಜನೆಯನ್ನು ಮಾಡಿಸಿರುತ್ತೇವೆ. ಇದಕ್ಕೆ ದೊಡ್ಡ ಮೊತ್ತದ 52,000 ಕೋಟಿ ರೂ.ಗಳ ಹಣ ಬೇಕಾಗುತ್ತದೆ. ಅದಕ್ಕಾಗಿ ಇದರಲ್ಲಿ ಕೇಂದ್ರದ ದೊಡ್ಡ ಪಾಲು ನಮಗೆ ಬರಬೇಕಾಗುತ್ತದೆ. ಕೇಂದ್ರಕ್ಕೆ ನಾವು ಇದರ ಬಗ್ಗೆ ವಿವರವನ್ನು ತೆಗೆದುಕೊಂಡು ಹೋಗಬೇಕಾದ ಸಂದರ್ಭ ನಮಗೆ ಬರುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೂ ಸಹಿತ ಈ ಯೋಜನೆ ಬಗ್ಗೆ ಸಂಪೂರ್ಣ ಮಾಹಿತಿ ಇದೆ.

ಅಧ್ಯಕ್ಷರು : ಡಿಮಾಂಡ್ಸ್ ಮೇಲೆ ವಿಸ್ತೃತವಾಗಿ ದರ ಬಗ್ಗೆ ಚರ್ಚೆ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಡಿಮಾಂಡ್ ಮೇಲೆ ಚರ್ಚೆಗೆ ಬಂದಾಗ ಅವರು ಉತ್ತರವನ್ನು ಹೇಳಲಿ. ನನ್ನ ಉತ್ತರ ಇಷ್ಟೆ. ನದಿಯಿಂದ ತಾವು ಏನು ಮಾಡುತ್ತಿದ್ದೀರಿ. 65 ರಿಂದ 70–80 ಟಿ.ಎಂ.ಸಿ. ನೀರು ಬೇಕಾಗುತ್ತದೆ. ನಮಗೆ ಕಾವೇರಿ ಮತ್ತು ಕೃಷ್ಣಾ ನದಿಯಲ್ಲಿ ನೀರು ಇಲ್ಲ. ಅದಕ್ಕೆ western flowing riversಗಳು ಏನು ಹೋಗಿವೆ, ಶರಾವತಿ, ಅಘನಾಶಿನಿ, ಕಾಳಿ ನದಿ ಇರಬಹುದು. ಆ ನೀರನ್ನು ಕುಡಿಯುವ ನೀರಿಗೆ ಬಳಸಿಕೊಳ್ಳಲಿಕ್ಕೆ ಏನು ತೊಂದರೆ ಇಲ್ಲ, ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಏನಾದರೂ ಈ ಸರ್ಕಾರ ಯೋಜನೆ ಮಾಡಿದೆಯಾ ? ಅದಕ್ಕೆ ಟ್ರಿಬ್ಯೂನಲ್ ಏನು ತೊಂದರೆ ಬರುವುದಿಲ್ಲ. ಉಳಿದಿದ್ದರಲ್ಲಿ ನಿಮಗೆ ಟ್ರಿಬ್ಯೂನಲ್ ತೊಂದರೆ ಬರುತ್ತದೆ. western flowing river is the only solution for Karnataka ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಜನ ಕುಡಿಯುವ ನೀರಿನ ಸಲುವಾಗಿ ಇನ್ನೊಂದಿಷ್ಟು ದಿವಸದಲ್ಲಿ ಸಾಯುತ್ತಾರೆ ನೋಡಿ.

ಶ್ರೀ ಹೆಚ್.ಕೆ. ಪಾಟೀಲ್ : ನಮ್ಮ ರಾಷ್ಟ್ರೀಯ ನೀರು ನೀತಿ ಏನಿದೆ, ಅದರಲ್ಲಿಯಾಗಲಿ, ನಮ್ಮ ರಾಜ್ಯದ ನೀರು ನೀತಿಯೊಳಗಾಗಲಿ, the first priority is for drinking water. ಆದ್ದರಿಂದ, ನಮಗೆ ಉಳಿದ ನದಿಗಳಿಂದ ಕುಡಿಯುವ ನೀರಿನ ತೊಂದರೆ ಆಗುವ ಪ್ರಶ್ನೆ ಇಲ್ಲ, ಮತ್ತೊಂದು ಕಡೆ ಕುಡಿಯುವ ನೀರಿಗೆ ಹೋಗುವ ಅವಶ್ಯಕತೆ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : Particularly ಕೆಲವು ನದಿ ನೀರು ಸಮುದ್ರಕ್ಕೆ ಹೋಗುತ್ತದೆ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ಕುಡಿಯುವ ನೀರಿಗೆ ಸಮಸ್ಯೆ ಆಗದಂತೆ ನಿರ್ವಹಿಸುತ್ತೇವೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದಂತೆ, ಇದು ಬಹಳ ಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು : ಡಿಮಾಂಡ್ಸ್ ಮೇಲೆ ಚರ್ಚೆ ಇದೆ. ಅಲ್ಲಿ ಅವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಬಿ.ಆರ್. ಯಾವಗಲ್: ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ. ಕಳೆದ ಒಂದು ವರ್ಷದಿಂದ ಅಧ್ಯಯನ, ಸ್ಟಡಿ ಎಲ್ಲಾ ಆಗಿ ಬಹಳ ಪ್ರಪೋಸಲ್‌ಗಳು ಆಗಿರುತ್ತವೆ. ಒಂದು ಯೋಜನೆಗಳು ಒಂದು ಯೂನಿಟ್‌ಗಳು ಇವತ್ತು ಬರುತ್ತಿಲ್ಲ. ಅದಕ್ಕೆ ಬಹಳಷ್ಟು ಸಿಬ್ಬಂದಿ ಕೊರತೆ, SLAC ಮತ್ತು ಅನೇಕ ತೊಂದರೆಗಳಿಂದಾಗಿ ಅವುಗಳು ಹಾಗೆ ನಿಂತಿವೆ. ಅದಕ್ಕೆ ಏನಾದರೂ ಕ್ರಮವನ್ನು ಜರುಗಿಸಿದ್ದೀರಾ ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು : Specific ಆಗಿ ಕೇಳಿ.

ಶ್ರೀ ಹೆಚ್.ಕೆ. ಪಾಟೀಲ್ : ಬಹುಶಃ MVS scheme ನಲ್ಲಿ ಬಹಳಷ್ಟು ತೀವ್ರವಾಗಿ ಮತ್ತು ಜಾಗ್ರತೆಯಾಗಿ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನವನ್ನು ಪಟ್ಟಿದ್ದೇವೆ. ಅಲ್ಲಿ ಸ್ವಲ್ಪ ಪ್ರಮಾಣದಲ್ಲಿ ಯಶಸ್ಸು ಆಗಿದೆ. ಇನ್ನೂ ತೀವ್ರಗೊಳಿಸುವಂಥ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಂಗನವಾಡಿ ಕಟ್ಟಡ

41(365) ಶ್ರೀ ರಾಜೀವ್.ಪಿ. (ಕುಡಚಿ) :– ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಕುಡಚಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿಗಳು ಸ್ವಂತ ಕಟ್ಟಡವಿಲ್ಲದೆ ಸಮುದಾಯಭವನ, ಶಾಲಾ ಕಟ್ಟಡ ಇತ್ಯಾದಿಗಳಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸ್ವಂತ ಕಟ್ಟಡವಿಲ್ಲದೆ ಇರುವ 109 ಅಂಗನವಾಡಿಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಅಂಗನವಾಡಿ ಮಕ್ಕಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವ ಹಿತದೃಷ್ಟಿಯಿಂದ ಹೊಸ ಅಂಗನವಾಡಿ ಕಟ್ಟಡಗಳನ್ನು ಎಂದಿನಿಂದ ನಿರ್ಮಾಣ ಮಾಡಲಾಗುವುದು;

(ಈ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು ?

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :–

(ಅ) ಕುಡುಚಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 109 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.